# ಬೆಳಗಾವಿ ಪ್ರದೇಶದ ಕಾನೂನುಭಂಗ ಚಳುವಳಿ, ಸ್ವದೇಶಿ ಕರ ನಿರಾಕರಣ ಚಳುವಳಿ ಹಾಗೂ ಆರ್ಥಿಕ ಪರಿಣಾಮಗಳು

ಜಯಾನಂದ ವಿಠ್ಠಲ ಹಟ್ಟಿ[1] & ಮಂಜುನಾಥ ತಲ್ಲೂರ[2]

[1]ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ.

[2] ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಪ್ರಿಯದರ್ಶಿನಿ ಪ್ರಥಮ ದರ್ಜೆ ಕಾಲೇಜು, ರಟ್ಟೀಹಳ್ಳಿ, ಹಾವೇರಿ.

DOI: https://doi.org/10.5281/zenodo.17411531

## ABSTRACT:

ಪ್ರಸ್ತುತ ಲೇಖನವು ಮುಂಬೈ-ಕರ್ನಾಟಕ ಪ್ರದೇಶದಲ್ಲಿ, ವಿಶೇಷವಾಗಿ ಬೆಳಗಾವಿ ವಿಭಾಗದಲ್ಲಿ ಸ್ವಾತಂತ್ರ್ಯ ಚಳುವಳಿಯ ಮಹತ್ವದ ಪಾತ್ರವನ್ನು ವಿಶ್ಲೇಷಿಸುತ್ತದೆ. 1924ರ ಗಾಂಧೀಜಿಯವರ ಅಧ್ಯಕ್ಷತೆಯ ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಚಳುವಳಿಗೆ ಒಂದು ದಿಕ್ಸೂಚಿಯಾಯಿತು. ಇದರ ನಂತರ, ಈ ಪ್ರದೇಶದಲ್ಲಿ ಕಾನೂನುಭಂಗ ಚಳುವಳಿ (ಉಪ್ಪಿನ ಸತ್ಯಾಗ್ರಹ), ಕರ ನಿರಾಕರಣ ಚಳುವಳಿ, ಮತ್ತು ಸ್ವದೇಶಿ ಚಳುವಳಿಗಳು ತೀವ್ರಗೊಂಡವು. ಅಂಕೋಲಾ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರಗಳು ಬ್ರಿಟಿಷರ ಆರ್ಥಿಕತೆಗೆ ದೊಡ್ಡ ಪೆಟ್ಟು ನೀಡಿದವು. ಸ್ವದೇಶಿ ಮತ್ತು ಖಾದಿ ಪ್ರಚಾರದಿಂದ ದೇಶೀಯ ಉದ್ಯಮಗಳು, ಗುಡಿ ಕೈಗಾರಿಕೆಗಳು ಬಲಗೊಂಡವು. ಈ ಎಲ್ಲಾ ಚಳುವಳಿಗಳು ಜನಸಾಮಾನ್ಯರನ್ನು ಸಂಘಟಿಸಿ, ಜಾಗೃತಿ ಮೂಡಿಸಿ, ದೇಶೀಯ ಆರ್ಥಿಕತೆಯನ್ನು ಬಲಪಡಿಸಿ, ಅಂತಿಮವಾಗಿ ಬ್ರಿಟಿಷರು ದೇಶ ಬಿಟ್ಟು ಹೋಗಲು ಪ್ರಮುಖ ಪ್ರೇರಣೆಯಾದವು.

## KEYWORDS:

ಬೆಳಗಾವಿ ಕಾಂಗ್ರೆಸ್ ಅಧಿವೇಶನ, ಕಾನೂನುಭಂಗ ಚಳುವಳಿ, ಸ್ವದೇಶಿ ಚಳುವಳಿ, ಕರ ನಿರಾಕರಣೆ, ಆರ್ಥಿಕ ಪರಿಣಾಮಗಳು.

### ಪ್ರಸ್ತಾವನೆ:

ಮುಂಬೈಕರ್ನಾಟಕ ಪ್ರದೇಶವು ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಪಾತ್ರ ವಹಿಸಿದೆ. 1885ರಲ್ಲಿ ಬಾಂಬೆಯಲ್ಲಿ ಎ.ಓ. ಹ್ಯೂಂರವರು ರಾಷ್ಟ್ರೀಯ ಕಾಂಗ್ರಸ್ಸನ್ನು ಸ್ಥಾಪಿಸಿದ ನಂತರ ಹಲವಾರು ರಾಷ್ಟ್ರೀಯ ನಾಯಕರು ಈ ಪ್ರದೇಶಕ್ಕೆ ಬಂದು ಹಲವಾರು ರಾಜಕೀಯ, ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಪ್ರದೇಶದ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಸಂಘಟಿಸಿದರು. 1924ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ನಡೆದು ಗಾಂಧೀಜಿಯವರು ಅಧ್ಯಕ್ಷತೆ ವಹಿಸಿಕೊಂಡು ಸ್ವಾತಂತ್ರ್ಯ ಚಳುವಳಿಯ ಜೊತೆ ರಚನಾತ್ಮಕ ಕಾರ್ಯಕ್ರಮಗಳಿಗೆ ಕರೆ ನೀಡಿದರು. ಇದರಿಂದ ದೇಶದ ಎಲ್ಲರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಸ್ವದೇಶಿ ಚಳುವಳಿಯಿಂದ ಬ್ರಿಟಿಷರಿಗೆ ಆರ್ಥಿಕ ನಷ್ಟವಾಯಿತು. ಜನಸಾಮಾನ್ಯರಲ್ಲಿ ಅರಿವು ಮೂಡಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ರಾಷ್ಟ್ರೀಯ ಕಾಂಗ್ರೆಸ್ ಲಾಹೋರ ಅಧಿವೇಶನದಲ್ಲಿ

ಜವಾಹರಲಾಲ್ ನೆಹರೂವರು ರಾವಿ ನದಿಯ ದಂಡೆಯ ಮೇಲೆ 1929 ರಾಷ್ಟ್ರ ಧ್ವಜವನ್ನು ಹಾರಿಸಿ ಸ್ವರಾಜ್ಯ ಬೇಡಿಕೆ ಇಡಲಾಯಿತು. 2611930ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಕಾಂಗ್ರೆಸ್ ನಿರ್ಧರಿಸಿತು. ಸವಿನಯ ಕಾನೂನುಭಂಗ ಚಳುವಳಿಗೆ ಕರೆ ನೀಡಲಾಯಿತು. ಭಾರತದ ತುಂಬಾ ಹಲವಾರು ಹೋರಾಟಗಳು ಪ್ರಾರಂಭಗೊಂಡವು. ಮುಂಬೈಕರ್ನಾಟಕ ಭಾಗದಲ್ಲಿಯು ಚಳುವಳಿಗಳು ತೀವ್ರ ಸ್ವರೂಪ ಪಡೆದು ಬ್ರಿಟಿಷರ ಮೇಲೆ ಹಲವಾರು ಪರಿಣಾಮಗಳುಂಟಾಗಿ ಬೇಗನೇ ದೇಶ ಬಿಟ್ಟು ಹೋಗುವಂತಾಯಿತು. ಈ ರಚನಾತ್ಮಕ ಕಾರ್ಯಕ್ರಮಗಳಿಂದ ಭಾರತೀಯರು ಸಂಘಟಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

**1924ರ ಬೆಳಗಾವಿಯ ಕಾಂಗ್ರೆಸ್ ಅಧಿವೇಶನ:**

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ 1924ರಲ್ಲಿ ನಡೆದ ಬೆಳಗಾವಿಯ ಕಾಂಗ್ರೆಸ್ ಅಧಿವೇಶನವು ಭಾರತದಲ್ಲಿಯೇ ಒಂದು ಐತಿಹಾಸಿಕ ದಿನವಾಗಿದೆ. ಗಾಂಧಿಯವರು ಇದರ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಇಲ್ಲಿ ಹಲವಾರು ಗೋಷ್ಠಿಗಳು ನಡೆದವು. ಗಾಂಧಿಯವರು ಅಸ್ಪೃಶ್ಯತಾ ನಿರ್ಮೂಲನೆ, ಮಹಿಳಾ ಸಬಲೀಕರಣ, ನೈರ್ಮಲ್ಯ, ಸ್ವದೇಶಿ ಚಳುವಳಿ, ಪಾನ ನಿರೋಧ, ಖಾದಿ ಪ್ರಚಾರ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಿಗೆ ಕರೆ ನೀಡಿದರು. ಅವರ ಈ ರಚನಾತ್ಮಕ ಕಾರ್ಯಗಳು ದೇಶದ ತುಂಬೆಲ್ಲ ಪ್ರಸಾರಗೊಂಡು ದೇಶದ ಜನಸಾಮಾನ್ಯರು ಈ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಈ ಅಧಿವೇಶನವು ಭಾರತದ ಸ್ವಾತಂತ್ರ್ಯ ಚಳುವಳಿಗೆ ಒಂದು ದಿಕ್ಸೂಚಿಯಾಯಿತು. ಹಲವಾರು ರಚನಾತ್ಮಕ ಕಾರ್ಯಕ್ರಮಗಳು ದೇಶದ ತುಂಬೆಲ್ಲ ಪ್ರಸಾರಗೊಂಡು ಜನಸಾಮಾನ್ಯರು ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

**ಕಾನೂನುಭಂಗ ಚಳುವಳಿ (ಉಪ್ಪಿನ ಸತ್ಯಾಗ್ರಹ):**

ಗಾಂಧೀಜಿಯವರು ಜನಸಾಮಾನ್ಯರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಲು ಕಾನೂನುಭಂಗ ಚಳುವಳಿ ಅಂದರೆ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದರು. ಸಾಬರಮತಿ ಆಶ್ರಮದಿಂದ 1930 ಮಾರ್ಚ್ 12ರಂದು 78 ಅನುಯಾಯಿಗಳೊಂದಿಗೆ ಉಪ್ಪಿನ ಸತ್ಯಾಗ್ರಹಕ್ಕಾಗಿ ದಂಡಿ ಯಾತ್ರೆ ಕೈಗೊಂಡರು. ಇಲ್ಲಿ ಸಾವಿರಾರು ಜನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದರು. ಏಪ್ರಿಲ್ 5 ಮತ್ತು 6ರಂದು ದಂಡಿಯಲ್ಲಿ ಉಪ್ಪನ್ನು ತಯಾರಿಸಿ ಮಾರಾಟ ಮಾಡಿ ಬ್ರಿಟಿಷ ಕಾನೂನುಗಳನ್ನು ಮುರಿದರು. ಗಾಂಧೀಜಿಯನ್ನು ಈ ಸತ್ಯಾಗ್ರಹದಿಂದ ಬಂಧಿಸಿ ಪೂನಾದ ಯಾರವಾಡ ಜೈಲಿನಲ್ಲಿ ಬಂಧನದಲ್ಲಿಟ್ಟರು. ಈ ದಂಡಿ ಸತ್ಯಾಗ್ರಹದಲ್ಲಿ ಬೆಳಗಾವಿಯ ವಿಭಾಗದಿಂದ ಮೈಲಾರ ಮಹದೇವ ಭಾಗವಹಿಸಿದ್ದರು.

**ಅಂಕೋಲಾ ಉಪ್ಪಿನ ಸತ್ಯಾಗ್ರಹ:**

ಗಾಂಧಿಯವರ ಅನುಯಾಯಿಗಳಾದ ಮುಂಬೈಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು ಅಂಕೋಲಾ ಉಪ್ಪಿನ ಸತ್ಯಾಗ್ರಹ ಮಾಡಲು ತೀರ್ಮಾನ ಕೈಗೊಂಡು ಕೌಜಲಗಿ ಹನುಮಂತರಾಯ, ಪರಮಪ್ಪ ನಾಯಕ, ಮೈಲಾರ ಮಹಾದೇವ, ಗಂಗಾಧರ ದೇಶಪಾಂಡೆ ಮುಂತಾದವರನ್ನು ಒಳಗೊಂಡ ಸಮಿತಿ ರಚಿಸಲಾಯಿತು. ಹೊನ್ನಾವರದ ಎಂ.ಪಿ. ನಾಡಕರ್ಣಿಯವರು ನಾಯಕತ್ವದಲ್ಲಿ ಈ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿಯಲ್ಲಿ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ದಾವಣಗೆರೆ ಮುಂತಾದ ಕಡೆಯಿಂದ

ಜನರು ಸೇರಿದರು. 1930 ಏಪ್ರಿಲ್ 13ರಂದು ಬ್ರಿಟಿಷರ ಕಾನೂನುಗಳನ್ನು ಮುರಿದು ಉಪ್ಪನ್ನು ತಯಾರಿಸಿ ಮಾರಾಟ ಮಾಡಲಾಯಿತು. ಇದೇ ರೀತಿಯಾಗಿ ಬಿಜಾಪುರದ ಬಿಸನಾಳ, ಧಾರವಾಡದ ಯಲ್ಲಾಪುರ, ಉಡುಪಿ, ಕುಂದಾಪುರ, ಕಾರ್ಕಳ, ಪುತ್ತೂರು ಮುಂತಾದ ಮುಂಬೈಕರ್ನಾಟಕ ಪ್ರದೇಶದಲ್ಲಿ ಉಪ್ಪನ್ನು ತಯಾರಿಸಿ ಮಾರಾಟ ಮಾಡಿದರು.

ಉಪ್ಪಿನ ಸತ್ಯಾಗ್ರಹದ ಮುಖ್ಯ ಉದ್ದೇಶ ಜನಸಾಮಾನ್ಯ ವರ್ಗವು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬೇಕೆಂಬ ಉದ್ದೇಶ ಹೊಂದಲಾಗಿತ್ತು. ಏಕೆಂದರೆ ಉಪ್ಪು ಎಲ್ಲರಿಗೂ ಬೇಕು. ಅದು ಕಡಿಮೆ ದರದಲ್ಲಿ ದೊರೆಯುತ್ತದೆ. ಆದರೂ ಸಹ ಉಪ್ಪಿನ ಸತ್ಯಾಗ್ರಹ ಮಾಡುವ ಉದ್ದೇಶ ಭಾರತೀಯರನ್ನು ಎಚ್ಚರಿಸುವುದಾಗಿತ್ತು. ಇದರ ಮುಖಾಂತರ ಸ್ವಾತಂತ್ರ್ಯ ಚಳುವಳಿಯ ಅರಿವನ್ನು ಮೂಡಿಸುವುದು ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದಾಗಿತ್ತು. ಆದುದರಿಂದ ದೇಶದ ಎಲ್ಲಾ ಸತ್ಯಾಗ್ರಹಗಳಲ್ಲಿ ಉಪ್ಪಿನ ಸತ್ಯಾಗ್ರಹ ಒಂದು ವಿಶಿಷ್ಟವಾದ ಮಹತ್ವವಾದ ಸತ್ಯಾಗ್ರಹವಾಗಿದೆ.

**ಬ್ರಿಟಿಷ್ ವಿರುದ್ಧ ಕರ ನಿರಾಕರಣ ಚಳುವಳಿ:**

ಕರ ನಿರಾಕರಣೆ ಚಳುವಳಿಯನ್ನು ಗಾಂಧೀಜಿಯವರು ಪ್ರಥಮ ಬಾರಿಗೆ ಬಾರ್ಡೋಲಿಯಲ್ಲಿ ಪ್ರಾರಂಭಿಸಿದ್ದರು. ಈ ಚಳುವಳಿಯು ಮುಂಬೈಕರ್ನಾಟಕ ಭಾಗದಲ್ಲಿ ತೀವ್ರವಾಗಿ ಪ್ರಸಾರಗೊಂಡಿತು. ಈ ಚಳುವಳಿಯ ಮುಖ್ಯ ಉದ್ದೇಶ ಬ್ರಿಟಿಷರಿಗೆ ತೆರಿಗೆ ಕಟ್ಟದೇ ಆರ್ಥಿಕ ನಷ್ಟವುಂಟು ಮಾಡುವುದಾಗಿತ್ತು. ಧಾರವಾಡ ಜಿಲ್ಲೆಯ ಹಿರೇಕೆರೂರಿನಲ್ಲಿ ವೀರನಗೌಡ ಪಾಟೀಲರ ನಾಯಕತ್ವದಲ್ಲಿ ಚಳುವಳಿ ಪ್ರಾರಂಭವಾಯಿತು. ಇದು ಸಿರ್ಸಿ, ಸಿದ್ದಾಪುರ, ಅಂಕೋಲಾ ಮುಂತಾದ ಕಡೆ ಪ್ರಸಾರಗೊಂಡು ಬ್ರಿಟಿಷರ ತೆರಿಗೆಯನ್ನು ಕಟ್ಟದೆ ಚಳುವಳಿ ಪ್ರಾರಂಭಿಸಿದರು.

**ಅರಣ್ಯ ಸತ್ಯಾಗ್ರಹ:**

ಬೆಳಗಾವಿ, ಧಾರವಾಡ, ಬಿಜಾಪುರ, ಗದಗ ಬಾಗಲಕೋಟೆ, ಹುಬ್ಬಳ್ಳಿ, ಕಲಘಟಗಿ, ಅಂಕೋಲಾ, ಸಿರ್ಸಿ, ಸಿದ್ದಾಪುರ ಮುಂತಾದ ಕಡೆ ಸಭೆಗಳನ್ನು ಮಾಡಿ ಬ್ರಿಟಿಷರ ಅರಣ್ಯ ಕಾನೂನು ಮುರಿದು ಮರಗಳನ್ನು ಕಡಿದು ಮರಗಳನ್ನು ಮಾರಾಟ ಮಾಡಲಾಯಿತು ಮತ್ತು ಸೌದೆಗೆ ಬಳಸಲಾಯಿತು. ಇದರ ಮೂಲ ಉದ್ದೇಶ ಬ್ರಿಟಿಷರಿಗೆ ಆರ್ಥಿಕ ನಷ್ಟವುಂಟು ಮಾಡುವುದಾಗಿತ್ತು ಹಾಗೂ ತಮಗೆ ಅವಶ್ಯವಿರುವ ಮರವನ್ನು ಪಡೆಯುವುದಾಗಿತ್ತು.

**ಸ್ವದೇಶಿ ಚಳುವಳಿ:**

ರಾಷ್ಟ್ರೀಯ ಕಾಂಗ್ರೆಸ್ ಸ್ವದೇಶಿ ಚಳುವಳಿಗೆ ಕರೆ ನೀಡಿತು. ಇದು ಮುಂಬೈಕರ್ನಾಟಕ ಭಾಗದಲ್ಲಿಯು ಪ್ರಾರಂಭವಾಯಿತು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ವಸ್ತುಗಳನ್ನು ಬಳಸಿ ಬ್ರಿಟಿಷರಿಗೆ ಆರ್ಥಿಕ ನಷ್ಟವುಂಟು ಮಾಡುವ ಉದ್ದೇಶದಿಂದ ಮತ್ತು ಈ ಚಳುವಳಿಯ ಮುಖಾಂತರ ಸ್ವದೇಶಿಯರ ವಸ್ತುಗಳಿಗೆ ಪ್ರೋತ್ಸಾಹಿಸಿ ಗುಡಿ ಕೈಗಾರಿಕೆಗಳನ್ನು ರಕ್ಷಿಸಿ ಸ್ವದೇಶಿಯರ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುವುದಾಗಿತ್ತು. ಈ ಚಳುವಳಿ ಕರ್ನಾಟಕದ ತುಂಬಾ ಪ್ರಸಾರಗೊಂಡಿತು. ಬ್ರಿಟಿಷರ ಬೃಹತ್ ಕೈಗಾರಿಕೆಗಳಿಂದ ಭಾರತೀಯರ ಗುಡಿ ಕೈಗಾರಿಕೆಗಳಿಗೆ ತೊಂದರೆಯಾಗಿ ಅನೇಕ ಜನ ಕೆಲಸವಿಲ್ಲದೆ ಅಲೆದಾಡುತ್ತಿದ್ದರು. ಅವರು ಆರ್ಥಿಕ ಸಂಕಷ್ಟದಲ್ಲಿದ್ದರು. ಈ ಚಳುವಳಿ ಸ್ವದೇಶಿಯರಿಗೆ ಅನುಕೂಲವಾಯಿತು. ಮುಂಬೈಕರ್ನಾಟಕ ಭಾಗದಲ್ಲಿ ಈ ಚಳುವಳಿ ತೀವ್ರ ಸ್ವರೂಪ ಪಡೆಯಿತು. ಭಾರತೀಯರು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಯಿತು.

ಬೆಳಗಾವಿ, ಬಿಜಾಪುರ, ಧಾರವಾಡ ಮುಂತಾದ ಕಡೆ ಬೆಂಕಿಕಡ್ಡಿ ಕಾರ್ಖಾನೆಗಳನ್ನು ಪ್ರಾರಂಭಿಸಲಾಯಿತು. ಕಾಲೇಕರವರು ಬೆಳಗಾವಿಯಲ್ಲಿ ದಂಡೋಪಂತರು ನವಲಗುಂದದಲ್ಲಿ ರಾಷ್ಟ್ರೀಯ ಶಾಲೆಗಳನ್ನು ತೆರೆದರು. ಆದರೆ ಬ್ರಿಟಿಷರು ಇವುಗಳಿಗೆ ಮಾನ್ಯತೆ ನೀಡಲಿಲ್ಲ. ಇದೇ ರೀತಿಯಾಗಿ ವೀರನಗೌಡ ಪಾಟೀಲರು ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮ ಶಾಲೆಯನ್ನು ಪ್ರಾರಂಭಿಸಿದರು. ಲಕ್ಷ್ಮೇಶ್ವರ ಮುಂತಾದ ಕಡೆ, ಪೆನ್ಸಿಲ್, ಬಳೆ, ಪಿಂಗಾಣಿ ಪಾತ್ರೆಗಳನ್ನು ತಯಾರಿಸಲು ಪ್ರಾರಂಭಿಸಿದರು. ಗಂಗಾಧರರಾವ್ ದೇಶಪಾಂಡೆ ಬೆಳಗಾವಿಯಲ್ಲಿ ಆಲೂರು ವೆಂಕಟರಾಯ, ಧಾರವಾಡದಲ್ಲಿ ಶಾಲೆಗಳನ್ನು ಪ್ರಾರಂಭಿಸಿದರು. ಕಾರ್ನಾಡ್ ಸದಾಶಿವರಾಯ ತಮ್ಮ ಮನೆಯಲ್ಲಿ ತಿಲಕ ಶಾಲೆಯನ್ನು ಆರಂಭಿಸಿದರು. 1840ರಿಂದ 1916ರ ಅವಧಿಯಲ್ಲಿ ಬೆಳಗಾವಿಯಲ್ಲಿ ಕೆ.ಎಲ್.ಇ. ವಿದ್ಯಾಸಂಸ್ಥೆ, ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಸ್ಥೆ, ಬಾಗಲಕೋಟೆಯಲ್ಲಿ ಬಸವೇಶ್ವರ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಇದೇ ರೀತಿಯಾಗಿ ಶೋಷಿತರಿಗಾಗಿ ಡಾ. ಅಂಬೇಡ್ಕರ, ದೇವರಾಯ ಇಂಗಳೆಯವರು ಬೆಳಗಾವಿ, ಧಾರವಾಡದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸಿದ್ದಪ್ಪ ಕಂಬಳಿ, ಡಾ. ಅಂಬೇಡ್ಕರವರ ಪರಿಶ್ರಮದಿಂದ ಕರ್ನಾಟಕ ವಿಶ್ವವಿದ್ಯಾಲಯವನ್ನು ಮುಂಬೈ ಸರ್ಕಾರದಲ್ಲಿ ಅನುಮೋದನೆ ನೀಡಿ ಈ ಭಾಗದ ಜನರಿಗೆಲ್ಲ ಶಿಕ್ಷಣ ನೀಡುವಲ್ಲಿ ಇವು ಪ್ರಮುಖ ಪಾತ್ರವಹಿಸಿ ಎಲ್ಲರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

**ಖಾದಿ ಪ್ರಚಾರ:**

ಗಾಂಧೀಜಿಯವರು 1924ರ ಬೆಳಗಾವಿಯ ಅಧಿವೇಶನ ಅಧ್ಯಕ್ಷತೆ ವಹಿಸಿಕೊಂಡ ನಂತರ ಸ್ವದೇಶಿ ಚಳುವಳಿ ಮತ್ತು ರಚನಾತ್ಮಕ ಕಾರ್ಯಕ್ರಮಗಳಿಗೆ ಕರೆ ನೀಡಿದರು. ಖಾದಿ ಎಂಬ ಅಸ್ತ್ರ ಬ್ರಿಟಿಷರನ್ನು ನಡುಗಿಸಿತು. ಖಾದಿ ದೇಶದ ತುಂಬ ಪ್ರಚಾರಕ್ಕೆ ಬಂದಿತು. ಎಲ್ಲರೂ ಗ್ರಾಮೀಣ ಭಾಗದಲ್ಲಿ ಚರಕದ ಮುಖಾಂತರ ನೇಯ್ದು ಬಟ್ಟೆಯನ್ನು ತಯಾರಿಸಿದರು. ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಖಾದಿಯ ಕೈಗಾರಿಕೆಗಳು ಸ್ಥಾಪನೆಗೊಂಡು ಕಡಿಮೆ ದರದಲ್ಲಿ ಬಟ್ಟೆಯನ್ನು ಪೂರೈಸಿದವು. ಇದು ಬ್ರಿಟಿಷ ಕೈಗಾರಿಕೆಗಳಿಗೆ ಆರ್ಥಿಕ ನಷ್ಟವನ್ನು ಮಾಡಿತು. ಗಾಂಧಿಯವರು ಸ್ವದೇಶಿ ಚಳುವಳಿಗೆ ಕರೆ ನೀಡಿದ್ದರಿಂದ ಬೆಳಗಾವಿ ಜಿಲ್ಲೆಯ ಗೋಕಾಕ ಹತ್ತಿರ 1923ರಲ್ಲಿ ಹುದಲಿಯ ಕಮರಿ ಎಂಬಲ್ಲಿ ಖಾದಿ ಗ್ರಾಮೋದ್ಯೋಗ ಸಂಸ್ಥೆ ಪ್ರಾರಂಭವಾಗಿ ಪ್ರಸಿದ್ಧಿ ಪಡೆಯಿತು. 1937ರಲ್ಲಿ ಏಪ್ರಿಲ್ 17 ರಂದು ಈ ಗ್ರಾಮಕ್ಕೆ ಗಾಂಧಿಯವರು ಭೇಟಿ ನೀಡಿ, ಖಾದಿಗೆ ಪ್ರೋತ್ಸಾಹಿಸಿದರು. 1939 ಸೆಪ್ಟಂಬರ್ 1 ರಂದು ಎಸ್. ಜಿ. ಘಡಕೆಯವರು ಬೆಳಗಾವಿಯ ಘಡಕೆ ಇಂಡಸ್ಟ್ರೀಸ್ ಪ್ರಾರಂಭಿಸಿದರು. 1939ರ ಜಾಗತಿಕ ಯುದ್ಧದ ಸಂದರ್ಭದಲ್ಲಿ ಇಲ್ಲಿಂದ ಟೈರ್‌ಗಳನ್ನು ಕಳುಹಿಸಿದ್ದರೆಂಬ ಉಲ್ಲೇಖವಿದೆ.

**ಸಿರಾಮಿಕ್ ಪ್ರೊಡಕ್ಟ್ಸ್ ಲಿಮಿಟೆಡ್:**

ಪುಣೆಯ ವ್ಹಿ.ಎ. ಜೋಶಿಯವರು 1960ರಲ್ಲಿ ಖಾನಾಪುರದ ರೈಲು ನಿಲ್ದಾಣದ ಹತ್ತಿರ ಸಿರಾಮಿಕ್ ಕಾರ್ಖಾನೆಯನ್ನು ಪ್ರಾರಂಭಿಸಿ ಇದರ ಜೊತೆಗೆ ರಟ್ಟಿನ ಕಾರ್ಖಾನೆ ಪ್ರಾರಂಭಿಸಿದರು. ಸುಟ್ಟ ಇಟ್ಟಿಗೆ, ಮಣ್ಣಿನ ಉಪಕರಣಗಳು, ಒಳ ಚರಂಡಿ ಪೈಪ್‌ಗಳನ್ನು ತಯಾರಿಸಿ ಕರ್ನಾಟಕ, ಮಹಾರಾಷ್ಟ್ರ, ಗೋವಾ ರಾಜ್ಯಗಳಿಗೆ ಕಳುಹಿಸಿ ಲಾಭ ಗಳಿಸಿದರು. ಇದೇ ರೀತಿಯಾಗಿ ಲಕ್ಷ್ಮಣರಾವ್ ಕಿರ್ಲೋಸ್ಕರ್ ಅವರು ಬೆಳಗಾವಿಯಲ್ಲಿ ಕಿರ್ಲೋಸ್ಕರ್ ಕಾರ್ಖಾನೆಯನ್ನು ಪ್ರಾರಂಭಿಸಿ ರೈತರಿಗಾಗಿ ಟ್ರ್ಯಾಕ್ಟರ್ ಮುಂತಾದ ರೈತರಿಗೆ ಬೇಕಾದ ವಸ್ತುಗಳನ್ನು ತಯಾರಿಸಿದರು. ಈ ರೀತಿಯಾಗಿ ಸ್ವದೇಶಿಯರು ಬ್ರಿಟಿಷರ ವಸ್ತುಗಳನ್ನು

ಬಹಿಷ್ಕರಿಸಿ, ಖಾದಿ ಉದ್ಯಮ, ಗುಡಿ ಕೈಗಾರಿಕೆಗಳು ಗ್ರಾಮೀಣ ಕೈಗಾರಿಕೆಗಳು, ನೂಲುವುದು, ಹತ್ತಿ ಕಾರ್ಖಾನೆಗಳು ಮನೆ ಬಳಕೆಯ ವಸ್ತುಗಳನ್ನು ತಯಾರಿಸಿ ಬ್ರಿಟಿಷರಿಗೆ ಆರ್ಥಿಕ ನಷ್ಟವುಂಟು ಮಾಡಿತು. ಆಲೂರು ವೆಂಕಟರಾಯರು ಬೆಂಕಿಕಡ್ಡಿ ಹಾಗೂ ಪೆನ್ಸಿಲ್ ಮುಂತಾದ ಕಾರ್ಖಾನೆಗಳನ್ನು ಪ್ರಾರಂಭಿಸಿದರು. ಅವರ ಸಹೋದರ ರಾಮರಾವ ಹಂಚಿನ ಕಾರ್ಖಾನೆಯನ್ನು ಖಾನಾಪುರದಲ್ಲಿ ಪ್ರಾರಂಭಿಸಿದ. ವಿಠಲ್‌ರಾವ್ ದೇಶಪಾಂಡೆ ಕಿತ್ತೂರಿನಲ್ಲಿ ನೇಯ್ಗೆ ಕಾರ್ಖಾನೆಯನ್ನು ಪ್ರಾರಂಭಿಸಿದರು. ಈ ರೀತಿಯಾಗಿ ಸ್ವದೇಶಿ ಕಾರ್ಖಾನೆ, ಸ್ವದೇಶಿ ವಸ್ತುಗಳಿಂದ ಬ್ರಿಟಿಷರು ಆರ್ಥಿಕ ನಷ್ಟ ಅನುಭವಿಸಲು ಪ್ರಾರಂಭಿಸಿದರು.

**ವಿದೇಶಿ ವಸ್ತುಗಳ ಬಹಿಷ್ಕಾರ:**

ಭಾರತದ ತುಂಬೆಲ್ಲಾ ಈ ಚಳುವಳಿ ತೀವ್ರ ಸ್ವರೂಪ ಪಡೆದುಕೊಂಡು ಬ್ರಿಟಿಷರ ವಸ್ತುಗಳನ್ನು ಬಹಿಷ್ಕರಿಸಲು ಪ್ರಾರಂಭಿಸಿದರು. ಬೆಳಗಾವಿಯ ಬಟ್ಟೆ ವ್ಯಾಪಾರಿಗಳು ವಿದೇಶಿಯ ಬಟ್ಟೆಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿದರು. ಧಾರವಾಡದಲ್ಲಿ ವಿದೇಶಿ ವಸ್ತುಗಳನ್ನು ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಧಾರವಾಡದ ಹೋಟೆಲ್ ಮಾಲೀಕರು ಚಹಾ ತಯಾರಿಸುವುದನ್ನು ನಿಲ್ಲಿಸಿದರು. ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆಗಳಲ್ಲಿ ಸ್ವರಾಜ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಬಾಗಲಕೋಟೆಯಲ್ಲಿ ಸ್ವದೇಶಿ ಅಂಗಡಿಗಳು ಪ್ರಾರಂಭವಾದವು. ಬೈಲಹೊಂಗಲ, ಕಿತ್ತೂರ, ಗದಗ, ಲಕ್ಷ್ಮೇಶ್ವರ ಮುಂತಾದ ಕಡೆ ಹತ್ತಿ ಮಿಲ್‌ಗಳು ಪ್ರಾರಂಭಗೊಂಡವು. ಜನರು ಖಾದಿ ಬಟ್ಟೆಯನ್ನು ಧರಿಸಲು ಪ್ರಾರಂಭಿಸಿದರು. ಈ ರೀತಿಯಾಗಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ಚಳುವಳಿಯ ಮುಖಾಂತರ ಜಾಗೃತಿ ಮೂಡಿಸಲಾಯಿತು.

**ಪರಿಣಾಮಗಳು:**

ಒಟ್ಟಾರೆಯಾಗಿ ಸ್ವದೇಶಿ ಚಳುವಳಿ, ಕಾನೂನುಭಂಗ, ಉಪ್ಪಿನ ಸತ್ಯಾಗ್ರಹ ಚಳುವಳಿಯಿಂದ ಭಾರತದಲ್ಲಿ ಹಲವಾರು ಪರಿಣಾಮಗಳಾದವು. ಈ ಚಳುವಳಿಯಿಂದ ಜನರು ಜಾಗೃತರಾದರು. ಸ್ವದೇಶಿ ಚಳುವಳಿಯಿಂದ ಜನರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಸಾಧ್ಯವಾಯಿತು ಮತ್ತು ದೇಶದ ಅಭಿಮಾನ ಹೆಚ್ಚಾಯಿತು. ದೇಶಿಯ ಕಾರ್ಖಾನೆಗಳು, ಗುಡಿ ಕೈಗಾರಿಕೆಗಳು ಬೆಳವಣಿಗೆಗೊಂಡು ಜನರು ಉದ್ಯೋಗದಲ್ಲಿ ತೊಡಗಿ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಬಲಪಡಿಸಿಕೊಂಡರು. ಜನರು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದ್ದರಿಂದ ಬ್ರಿಟಿಷರ ಆರ್ಥಿಕ ವ್ಯವಸ್ಥೆಗೆ ಪೆಟ್ಟುಬಿದ್ದಿತು. ಖಾದಿ ಚರಕ ಪ್ರಚಾರಕ್ಕೆ ಬಂದವು. ಉಪ್ಪಿನ ಸತ್ಯಾಗ್ರಹ ಜನಸಾಮಾನ್ಯರಲ್ಲೂ ಸ್ವಾತಂತ್ರ್ಯದ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಪ್ರತಿಯೊಬ್ಬರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಉದ್ದೇಶದಿಂದ ಅಧ್ಯಕ್ಷರಾದ ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಕೈಗೊಂಡು ಯಶಸ್ವಿಯಾದರು. 1924ರ ಬೆಳಗಾವಿಯ ಅಧಿವೇಶನದ ಅಧ್ಯಕ್ಷರಾಗಿ ಗಾಂಧೀಜಿಯವರು ಕರೆ ನೀಡಿದ ಸ್ವದೇಶಿ, ಅಸ್ಪೃಶ್ಯತಾ ನಿರ್ಮೂಲನ ಕಾರ್ಯ, ಖಾದಿ ಪ್ರಚಾರ, ಮಹಿಳಾ ಸಬಲೀಕರಣ, ಗ್ರಾಮೀಣಾಭಿವೃದ್ಧಿ ದೇಶದ ಜನರನ್ನು ತಲುಪಿ ದೇಶದ ಜನರೆಲ್ಲರೂ ಚಳುವಳಿಯಲ್ಲಿ ಭಾಗವಹಿಸಲು ಈ ಸಮ್ಮೇಳನ ಸ್ವಾತಂತ್ರ್ಯ ಚಳುವಳಿಗೆ ದಿಕ್ಸೂಚಿಯಾಯಿತು. ಸ್ವದೇಶಿ ಕಾನೂನುಭಂಗ ಚಳುವಳಿಗಳು ಬ್ರಿಟಿಷರಿಗೆ ಎಚ್ಚರಿಕೆ ಘಂಟೆಯಾಗಿ ಭಾರತದಿಂದ ಬೇಗನೆ ಹೋಗಲು ಇವು ಪ್ರೇರಣೆಯಾದವು ಮತ್ತು ಸ್ವದೇಶಿ ಚಳುವಳಿಗಳು ಭಾರತೀಯರನ್ನು ಒಂದುಗೂಡಿಸುವಲ್ಲಿ ಹಾಗೂ ಉದ್ಯೋಗ, ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ಸಾಧ್ಯವಾಯಿತು.

**ಪರಾಮರ್ಶನ ಗ್ರಂಥಗಳು:**


1. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಎನ್. ಪಿ. ಶಂಕರನಾರಾಯಣರಾವ್
2. ಕರ್ನಾಟಕದ ಇತಿಹಾಸ, ಸೂರ್ಯನಾಥ ಕಾಮತ್
3. ಅಂಬೇಡ್ಕರ್‌ರವರ ಬರಹಗಳು, ಭಾಷಣಗಳು.
4. ಜ್ಯೋತಿಬಾ ಪುಲೆ, ಡಾ. ಸದಾಶಿವ ಮಿರ್ಜಿ
5. ಸ್ತ್ರೀ ವಿಮೋಚನಾ ಹೋರಾಟಗಳು, ಮಂಗಲಾ ಕಾಳೆ, ಅನಾರ್ಯ ಪ್ರಕಾಶನ, ಧಾರವಾಡ, 1996
6. Freedom Struggle, Bipan Chandra, Amales Tripathi
7. Modern Indian History, V.D. Mahajan
8. A History of India Volume One, Romila Thapar
9. Karnataka and Balagavi, Gazetteer



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.